

**ದ್ವೇಷದ ಅಮಲಿನ ಕೊನೆ ಎಲ್ಲಿಯವರೆಗೆ ಎಂಬುದನ್ನು ಮಹಾಭಾರತದ ಮೂಲ ಕತೆ ಹೇಳುತ್ತದೆ. ಅದನ್ನೇ ಪುನರುಚ್ಚರಿಸುವ ರನ್ನನ ಗದಾಯುದ್ಧದ ಕಡೆಯ ಪದ್ಯಗಳು ಇನ್ನಷ್ಟು ಪರಿಣಾಮಕಾರಿಯಾಗಿವೆ.**

ಎಂದು ಬೆಲೆ ಕಟ್ಟಿ ವ್ಯಾಪಾರ ಮಾಡತೊಡಗಿದ್ದವು ಎನ್ನುತ್ತಾನೆ. ಮನುಷ್ಯನ ಜೀವನ ವ್ಯಾಪಾರ ಅವನ ಅವಿವೇಕದ ವೈಪರೀತ್ಯದಿಂದ ಅವನತಿಗೆ ಇಳಿಯುವುದಾದರೆ ಅಲ್ಲಿ ಪಿಶಾಚಿಗಳು ತಮ್ಮ ಮಾರುಕಟ್ಟೆಯನ್ನು ಆರಂಭಿಸುತ್ತವೆ ಎನ್ನುವುದು ರನ್ನನ ಉದ್ದೇಶವಿರಬಹುದೇ? ದುರ್ಯೋಧನನ ವೈಶಂಪಾಯನ ಸರೋವರ ಗಮನ ಸಂಗತಿ ಬರುವುದು ಕುರುಕ್ಷೇತ್ರದ ಕೊನೆಯ ದಿನದಲ್ಲಿ. ಒಟ್ಟು ರನ್ನನ 'ಗದಾಯುದ್ಧ' ಕಾವ್ಯವು ಶತಮಾನಗಳಲ್ಲಿ ಜರುಗಿಹೋದ ಘೋರ ಯುದ್ಧಗಳ ಪ್ರತಿಮಾ ರೂಪಕವಾಗಿದೆ.

ಚಿತ್ರದುರ್ಗ ಮೊದಲುಗೊಂಡು ಇತಿಹಾಸ ಘಟಿಸಿದ ಬಹುದೊಡ್ಡ ರಾಜಧಾನಿಗಳ ಆಸುಪಾಸಿನ ಗ್ರಾಮಗಳಲ್ಲೆಲ್ಲಾ ಯುದ್ಧದುರಂತ ವಿವರ ಕಥನಗಳು, ಘಟನೆಗಳು ಇತಿಹಾಸದ ಪುಟಗಳನ್ನು ತುಂಬಿ ಹೊರಚೆಲ್ಲುವಂತೆ ಕೇಳಿ ಬರುತ್ತವೆ. ರಾಜ ಮಹಾರಾಜರಿಗೆ ಯುದ್ಧವೆಂಬುದು ಮಾನಾಪಮಾನದ, ರಾಜ್ಯ ಸಾಧನೆಯ ಪ್ರಶ್ನೆ. ಆದರೆ ಯುದ್ಧ ನಡೆದ ಸ್ಥಳಗಳು, ಅಂತೆಯೇ ಸೈನ್ಯ ನಡೆದ ಕಾಲುದಾರಿಗಳಲ್ಲಿ ಜರುಗಿದ ಜನಪದರ ಬದುಕಿನ ಹಾನಿಯನ್ನು ಲೆಕ್ಕವಿಟ್ಟವರು ಯಾರು? ಹಳ್ಳಿಗೆ ಹಳ್ಳಿಯೇ, ಪಟ್ಟಣಕ್ಕೆ ಪಟ್ಟಣವೇ ಗಂಟುಮೂಟೆ ಕಟ್ಟಿಕೊಂಡು, ಹೆತ್ತ ಅಸುಮಕ್ಕಳನ್ನು ಎಸೆದು, ಎತ್ತು, ಕತ್ತೆಗಳನ್ನು ಬಿಟ್ಟುಕೊಂಡು ದಿಕ್ಕು ಕಂಡತ್ತ ಗುಳೆ ಹೋದ ಕತೆಗಳು ಅಸಂಖ್ಯಾತ ಇವೆ. ಹೀಗಾಗಿ ಪಂಪ, ರನ್ನರ ಇಲ್ಲವೇ ಮಹಾಭಾರತದ ಕುರುಕ್ಷೇತ್ರವನ್ನು ಕೇವಲ ಪುರಾಣವನ್ನಾಗಿ ಓದುವುದಕ್ಕಿಂತ ನಡೆದ ಎಲ್ಲಾ ಕಾಲದ ವಾಸ್ತವಿಕ ಸಂಗತಿಗಳೊಂದಿಗೆ ತಳಕು ಹಾಕಿ ನೋಡುವ ಅಗತ್ಯವಿದೆ. ಪಂಪನು 'ಆದಿಪುರಾಣ'ದಲ್ಲಿ, ರನ್ನನು 'ಗದಾಯುದ್ಧ'ದಲ್ಲಿ ಹೇಳುವ ಮತ್ತೊಂದು ಸಮಾನವಾದ ಮಾತು ಎಂದರೆ, ಯುದ್ಧಕ್ಕೆ ರಾಜ್ಯರಾಜ್ಯಗಳ ಶತ್ರುಗಳೇ ಬೇಕೆಂದಿಲ್ಲ. ತಂದೆ–ಮಕ್ಕಳ ನಡುವೆಯೂ ಶತ್ರುತ್ವದ ಉನ್ಮಾದ ಹುಟ್ಟಬಹುದು. ಸೋದರರಲ್ಲೂ ಕಾದಾಟ ಏರ್ಪಡಬಹುದು.

ಇಱಿಯಿಸುವೆ ತಂದೆ ಮಕ್ಕಳ
ನಿಱಿಯಿಸುವಯ್ ಸೋದರರ್ಕಳಂ ತಮ್ಮೊಳ್ತ
ಟ್ತಿಱಿಯಿಸುವಯ್ ಗುರುಶಿಷ್ಯರ
ನಱಿಗುಲಿ ನಿನ್ನಿಂ ನಿಕೃಷ್ಟರಾದರುಮೊಳರೇ |

ಈ ಕಂದ ಪದ್ಯದ ನಾಲ್ಕನೇ ಸಾಲಿನ ಮೊದಲ ಪದ 'ನಱಿಗುಲಿ' ಎಂದಿದೆ. ಅಧಿಕಾರದ ಮದ ಅಧಿಕವಾದಾಗ ಸಂಬಂಧಕ್ಕೆಲ್ಲಿ ಬೆಲೆ? ಧರ್ಮಾಧರ್ಮಗಳ ವಿಚಾರವೆಲ್ಲಿಯದು? ಕಾಲಾನುಕಾಲದಿಂದ ನಡೆದುಬಂದ ಬದುಕಿನಧರ್ಮ, ಅರ್ಥ ನಾಶವಾಗಬಹುದು. ಅದು 'ಅಱಿಗುಲಿ' ಪದದ ಅರ್ಥ. ಅಥವಾ ಪ್ರತ್ಯೇಕ ಪದವನ್ನಾಗಿ ಪರಿಭಾವಿಸಿ 'ನಱಿಗುಲಿ' ಎಂದುಕೊಂಡರೆ ಕಾದಾಡಿಸಿದ ನರರನ್ನೇ ಬಲಿ ಹಾಕುವ ದ್ವೇಷ ಸಂಗತಿ ಎಂದಾದರೂ ತಿಳಿಯಬಹುದು.

★★★